ದಿನಾಂಕಃ 11-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

<u>ಮುಂದುವರೆದ ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ ಎಜಿವಿ ವಕೀಲರಿಂದ:</u>

ಶ್ರೀಶೈಲ್ ಹೊಸಕೋಟೆ ಇವರು ದಿನಾಂಕಃ 29-12-2023 ರಂದು ಮೃತಪಟ್ಟಿರುತ್ತಾರೆ. ನನಗೆ ಅದೇ ದಿನ ಗೊತ್ತಾಗಿರುತ್ತದೆ. ನಾನು ಅವರ ಶವ ಸಂಸ್ಕಾರಕ್ಕೆ ಹೋಗಿರಲಿಲ್ಲ. ಸದರಿ ಶ್ರೀಶೈಲ್ ಹೊಸಕೋಟೆ ಇವರು ಮೃತಪಟ್ಟ ಒಂದು ವಾರದ ನಂತ ಅವರ ಹೆಂಡತಿ-ಮಕ್ಕಳನ್ನು ಹಣದ ಕುರಿತು ವಿಚಾರ ಮಾಡಿರುತ್ತೇನೆ, ಅವರು ಒಂದು ತಿಂಗಳು ಕಾಲಾವಕಾಶ ಕೋರಿದ್ದರು. ಸದರಿ ವಿಷಯ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೃತ ಶ್ರೀಶೈಲ್ ಇವರಿಗೆ 2 ನೇ ಪ್ರತಿವಾದಿ ಒಬ್ಬನೆ ಮಗ ಎಂದರೆ ಸರಿ. 2 ನೇ ಪ್ರತಿವಾದಿಗೆ ಟ್ರಕ್ ವ್ಯವಹಾರ ರಾಂಪೂರದಲ್ಲಿ ಇರುತ್ತದೆ. ಆ ಬಗ್ಗೆ ದಾಖಲೆಗಳನ್ನು ನಾನು ನೋಡಿಲ್ಲ. ಶ್ರೀಶೈಲ್ ಹೊಸಕೋಟೆ ಇವರು ಜೀವಂತ ಇದ್ದಾಗ ನಾನು ಭೇಟಿಯಾಗುತ್ತಿದ್ದೆನು, ಆಗ 2 ನೇ ಪ್ರತಿವಾದಿ ಟ್ರಕ್ ವ್ಯವಹಾರ ಮಾಡುತ್ತಿರುವುದು ಗೊತ್ತಾಗಿರುತ್ತದೆ. 2 ನೇ ಪ್ರತಿವಾದಿ ಟ್ರಕ್ ವ್ಯವಹಾರ ಮಾಡಿಕೊಂಡು ರಾಂಪೂರದಲ್ಲಿ ವಾಸ ಇರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೃತ ಶ್ರೀಶೈಲ್ ಹೊಸಕೋಟೆ ಅವರ ಕುಟುಂಬದ ಅಡಚಣೆ ಸಲುವಾಗಿ ನನ್ನಿಂದ 10 ಲಕ್ಷ ರೂಪಾಯಿ ಸಾಲ ಪಡೆದಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಸಾಲದ ಭದ್ರತೆಗಾಗಿ ನಿಪಿ-1 ರ ದಾಖಲೆ ಬರೆದುಕೊಟ್ಟಿದ್ದನು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ದಾವೆ ದಾಖಲು ಮಾಡುವ ಮೊದಲು ಪ್ರತಿವಾದಿಯರಿಗೆ ನೋಟಿಸ ಕೊಟ್ಟಿದ್ದೆನು ಎಂದರೆ ಸರಿ. ಸದರಿ ನೋಟಿಸಿಗೆ ಪ್ರತಿವಾದಿಯರು ಉತ್ತರ ಕೊಟ್ಟಿರುತ್ತಾರೆ. ಆ ಬಗ್ಗೆ ವಾದ ಪತ್ರದಲ್ಲಿ ಮತ್ತು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರು ನೀಡಿದ ಉತ್ತರದ ನೋಟಿಸನ್ನು ಹಾಜರಪಡಿಸಿರುವುದಿಲ್ಲ. ಮೃತ ಶ್ರೀಶೈಲ್ ಇವರ ಹೆಸರಿನಲ್ಲಿ ಆಸ್ತಿಗಳು ಇರುವ ಕುರಿತು ನಾನು ವಿಚಾರಣೆ ಮಾಡಿಲ್ಲ. ಮೃತ ಶ್ರೀಶೈಲ್ ನನ್ನಿಂದ 10 ಲಕ್ಷ ರೂಪಾಯಿ ಸಾಲ ಪಡೆದಿರುವ ವಿಷಯ ಪ್ರತಿವಾದಿಯರಿಗೆ ಗೊತ್ತಿಲ್ಲ, ಆದರೂ ಅವರಿಗೆ ಸುಳ್ಳು ನೋಟಿಸ ಕೊಟ್ಟು ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>**ಮರು ವಿಚಾರಣೆ: ಇಲ್ಲ.**</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ ಅಂತಾ ಒಪ್ಪಿರುವರು.

ASHAPPA Digitally signed by ASHAPPA Date: 2026.02.11 16:41:49 +0530

ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಪ್ರ.ದ.ನ್ಯಾದಂ.ಗಳು, ಬನಹಟ್ಟಿ

ಹಿರಿಯ ದಿವಾಣಿ ನಾಯಾಧೀಶರು ಮತ್ತು ಪ್ರ.ದ.ನ್ಯಾದಂ.ಗಳ ನ್ಯಾಯಾಲಯ, ಬನಹಟ್ಟಿ

ಅಸಲು ದಾವಾ ಸಂ.206/2024
ಪಿಡಬ್ಲ್ಯೂ-2

| | | |
|---|---|---|
| ಹೆಸರು | : | ರಮೇಶ ಯಕ್ಸಂಬಿ |
| ತಂದೆಯ ಹೆಸರು | : | ಬಸಪ್ಪ |
| ವಯಸ್ಸು | : | 42 ವರ್ಷ |
| ಉದ್ಯೋಗ | : | ವಕೀಲರು |
| ವಾಸಸ್ಥಳ | : | ರಬಕವಿ |

ದಿನಾಂಕಃ 10-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.

ಮುಖ್ಯ ವಿಚಾರಣೆಃ- ವಾದಿ ಪರ ವಕೀಲರಿಂದ

ನಾನು ಸುಮಾರು 14 ವರ್ಷಗಳಿಂದ ಬನಹಟ್ಟಿ ನ್ಯಾಯಾಲಯದಲ್ಲಿ ವಕೀಲರಾಗಿ ಸೇವೆ ಸಲ್ಲಿಸುತ್ತಿದ್ದೇನೆ. ನನಗೆ ಈ ಪ್ರಕರಣದ ವಾದಿ ಮತ್ತು ಮೃತ ಶ್ರೀಶೈಲ್ ಹೊಸಕೋಟೆ ಗೊತ್ತು. ದಿನಾಂಕಃ 18-04-2023 ರಂದು ವಾದಿ ನನ್ನ ಸಮಕ್ಷಮ ಮೃತ ಶ್ರೀಶೈಲ್ ಹೊಸಕೋಟೆ ಇವರಿಗೆ 10 ಲಕ್ಷ ರೂಪಾಯಿಯನ್ನು ಸಾಲದ ರೂಪದಲ್ಲಿ ರಬಕವಿಯ ನನ್ನ ಕಛೇರಿಯಲ್ಲಿ ಕೊಟ್ಟಿರುತ್ತಾರೆ. ಆ ಸಮಯದಲ್ಲಿ ನಾನು, ವಾದಿ, ಮೃತ ಶ್ರೀಶೈಲ್ ಹೊಸಕೋಟೆ ಹಾಗೂ ವಿಜಯ ಹೂಗಾರ ವಕೀಲರು ಇದ್ದರು. ಸದರಿ ಮೃತ ಶ್ರೀಶೈಲ್ ಹೊಸಕೋಟೆ ಇವರ ಹೇಳಿಕೆಯ ಮೇರೆಗೆ ನಾನು ಪ್ರಾಮಿಸರಿ ನೋಟಿ ಬರೆದಿರುತ್ತೇನೆ. ಸದರಿ ದಾಖಲೆಯನ್ನು ನೋಡುತ್ತಿದ್ದು, ಅದನ್ನು ಈಗಾಗಲೇ ನಿಪಿ-1 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-1 ಸಿ ಎಂದು ಗುರುತಿಸಲಾಯಿತು. ನಿಪಿ-1 ಕ್ಕೆ ಶ್ರೀಶೈಲ್ ಹೊಸಕೋಟೆ ಮತ್ತು ಹೂಗಾರ ವಕೀಲರು ಸಹಿ ಹಾಕಿರುತ್ತಾರೆ.

ಪಾಟೀ ಸವಾಲುಃ- ಪ್ರತಿವಾದಿ ಪರ ವಕೀಲರಿಂದ

ಸದರಿ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ ಅಂತಾ ಒಪ್ಪಿರುವರು.

ASHAPPA Digitally signed by ASHAPPA Date: 2026.02.11 16:41:57 +0530

ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಪ್ರ.ದ.ನ್ಯಾದಂ.ಗಳು, ಬನಹಟ್ಟಿ